# 10

# ಪ್ರಶ್ನೆ:

# “ನಾನು ಹೊಸ ಒಡಂಬಡಿಕೆ ಸಭೆಯ ಒಬ್ಬ ಸದಸ್ಯನು ಯಾಕೆ ಆಗಿರಬೇಕು?”

## ಉತ್ತರ:

ನೀವು ಹೊಸ ಒಡಂಬಡಿಕೆಯ ಸಭೆಯ ಒಬ್ಬ ಸದಸ್ಯನಾಗಬೇಕಾಗಿದ್ದರೆ, ಅದಕ್ಕಾಗಿ ಸರಳವಾದ ಮತ್ತು ಒತ್ತಾಯ ಪೂರ್ವಕವಾದ ಕಾರಣಗಳಿರಬೇಕು. ಅದಲ್ಲದೇ ಹೊಸ ಒಡಂಬಡಿಕೆಯ ಕ್ರೈಸ್ತನಾಗಲು ಬದ್ಧವಲ್ಲದ ಕಾರಣಗಾಳಾದ ಕೆಲವು ವಿಚಾರಗಳನ್ನು ಕುರಿತು ನೀವು ಯೋಚಿಸುತ್ತಿರ ಬಹುದು.

### ಸಾಕಷ್ಟಾಗಿರದ ಕಾರಣಗಳು

ಸಭೆಯ ಸದಸ್ಯನಾಗಿರಲು ಕೊಟ್ಟ ಕಾರಣಗಳು ಕೆಲವು ಸಲ ಸಾಕಷ್ಟಾಗಿರುವದಿಲ್ಲ. ಸಮಾಜದಲ್ಲಿ ಅದು ಪ್ರಸಿದ್ಧವಾಗಿರುವದರಿಂದ, ನೀವು ನಮ್ಮ ಕರ್ತನ ಸಭೆಯ ಒಬ್ಬ ಸದಸ್ಯನಾಗಿದ್ದರೆ, ನೀನು ನಿಜವಾಗಿ ಕ್ರಿಸ್ತನ ಅನುಯಾಯಿಯಾಗಿರುವದಿಲ್ಲ. ಕೆಲವು ಸಲ ಕರ್ತನ ಸಭೆಯು “ಎಲ್ಲಾ ಜನರ ಮೆಚ್ಚಿಕೆ ಪಡೆದುಕೊಂಡು” (ಅಪೊಸ್ತಲರ ಕೃತ್ಯಗಳು 2:47); ಪ್ರಸಿದ್ಧವಾಗಿರಬಹುದು; ಆದರೆ ಹೆಚ್ಚಾದ ಸಮಯದಲ್ಲಿ, ದುಷ್ಟತ್ವವು ಪ್ರಸಿದ್ಧವಾಗಿದ್ದು, ನಮ್ಮ ಕರ್ತನ ಸಭೆಯು ಕುಗ್ಗಿಹೋಗುತ್ತಿರುವುದು. “ಲೋಕವೆಲ್ಲವೂ ಕೆಡುಕನ ವಶದಲ್ಲಿ ಬಿದ್ದಿದೆ” (1 ಯೋಹಾನ 5:19). ಆದುದರಿಂದ, ಕರ್ತನ ಸಭೆಯ ತಾತ್ಕಾಲಿಕ ಪ್ರಸಿದ್ಧಿಯ ಕಾರಣದಿಂದ ನೀವು ನಿಮ್ಮ ಧರ್ಮವನ್ನು ಆಯ್ದುಕೊಂಡರೆ, ನೀವು ತಪ್ಪಾಗಿ ತಿಳಿಸಲ್ಪಟ್ಟಿರುವಿರಿ.

ನಿಮ್ಮ ವ್ಯವಹಾರಕ್ಕೆ ಸಹಾಯವಾಗುವುದು ಇಲ್ಲವೇ ನಿನ್ನ ಆರ್ಥಿಕ ಪರಿಸ್ಥಿತಿಗೆ ಸಹಾಯವಾಗುವುದು ಎಂದು ನಂಬುವದರಿಂದ ಕ್ರೈಸ್ತನಾಗಲು ಶೋಧಿಸಲ್ಪಟ್ಟರೆ, ಆಗ ನೀವು ತಪ್ಪಾದ ಮಾರ್ಗದಲ್ಲಿ ಯೋಚಿಸುತ್ತಿರುವಿರಿ. ಅಂಥ ಪ್ರಯತ್ನ ಮಾಡುವವನು ಹೇಗೂ ಕ್ರೈಸ್ತನಾಗುವದೇ ಇಲ್ಲ; ಅವನು ವಿಧೇಯತೆಯ ರೂಪದ ಮುಖಾಂತರ ಮಾತ್ರವೇ ಹೋಗಬಹುದು. ಅವನ ಕೃತ್ಯಗಳು ಇತರ ಜನರನ್ನು ಮೂರ್ಖರನ್ನಾಗಿ ಮಾಡಿದರೂ, ದೇವರು ಅವನ ಹೃದಯದ ಪರಿಸ್ಥಿತಿಯನ್ನು ತಿಳಿದಿರುವನು. ಅಂಥ ದುರುದ್ದೇಶವುಳ್ಳ ವ್ಯಕ್ತಿಯ ಹೆಸರು ದೇವಾಲಯದ ಹಾಜರಿ ಪುಸ್ತಕದಲ್ಲಿ ಕೂಡಿಸಲ್ಪಡಬಹುದು, ಆದರೆ ಜೀವ ಬಾಧ್ಯರ ಪುಸ್ತಕಕ್ಕೆ ಅಲ್ಲ.

ಭಾವನಾತಿರೇಕವಾದದ್ದಾಗಿದ್ದರೂ, ಸಭೆಯ ಸದಸ್ಯನಾಗಿರುವದಕ್ಕಾಗಿ ಸಾಕಷ್ಟಾಗಿರದ ಇನ್ನೊಂದು ಕಾರಣವು, ನಿನ್ನ ಬಂಧುಗಳು ಸದಸ್ಯರಾಗಿರುವುದು.

ನೀನು ನಿನ್ನ ತಾಯಿಯನ್ನು ಪ್ರೀತಿಸದಿದ್ದರೆ ನೀನು ಏನಾಗಿರತಕ್ಕದ್ದೋ ಆದಾಗಿರುವದಿಲ್ಲ. ಹೀಗಿದ್ದರೂ, ನಿನಗಾಗಿ ಆಕೆ ನಿನ್ನ ಧಾರ್ಮಿಕ ತೀರ್ಮಾನಗಳನ್ನು ಮಾಡಲು ಬಿಟ್ಟರೆ, ಆಗ ನಿನಗೆ ಮಾನವ ವಿಗ್ರಹಾರಧನೆಯ ವಿಷಯವಿರುವುದು. ಅದು "ಮಾತೃ-ಪೂಜೆ" ಎಂದು ಕರೆಯಲ್ಪಡುತ್ತದೆ. ಯೇಸು ಹೇಳಿದ್ದರ ಬಗ್ಗೆ ಯೋಚನೆ ಮಾಡಿರಿ:

> ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು; ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು. ತಂದೆಯ ಮೇಲಾಗಲಿ, ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ - ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಮಮತೆ ಇಡುವದಕ್ಕಿಂತ - ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ (ಮತ್ತಾಯ 10:34-37).

ಒಬ್ಬ ಸ್ನೇಹಿತನಾಗಲೀ ಇಲ್ಲವೇ ಬಂದುವಾಗಲೀ, "ನಿನಗೆ ಸಭೆಯ ಅಗತ್ಯತೆಯಿದೆ, ಮತ್ತು ಸಭೆಗೆ ನಿನ್ನ ಅಗತ್ಯತೆ ಇದೆ" ಎಂದು ನಿನಗೆ ಹೇಳಿದರೆ, ಆಗ ಆ ವ್ಯಕ್ತಿಯು ಕೇವಲ ಅರ್ಧ ಸರಿಯಾಗಿ ಹೇಳಿದ್ದಾನೆ. ನಿನಗೆ ಸಭೆಯ ಅಗತ್ಯತೆಯಿದೆ, ಹೌದು; ಆದರೆ ದೇವರ ಸಭೆಗೆ ಯಾವ ವೈಯಕ್ತಿಕ ವ್ಯಕ್ತಿಯ ಅಗತ್ಯತೆಯಿಲ್ಲ. ನೀನು ಒಂದು ಸಭೆಯ ಸದಸ್ಯನಾಗುವದರಿಂದ ನಿನ್ನ ಪಟ್ಟಣದಲ್ಲಿಯ ಸಭೆಗೆ ಒಂದು ಉಪಕಾರಮಾಡುತ್ತಿರುವೆನೆಂದು ನೀನು ಯೋಚಿಸಿದರೆ, ಆಗ ನೀನು ಕ್ರೈಸ್ತನಾಗಲು ಇನ್ನೂ ಸಿದ್ಧನಾಗಿರುವದಿಲ್ಲ. ಆ ರೀತಿಯ ಯೋಚಿಸುವಿಕೆಯು ದೇವರ ರಾಜ್ಯದಲ್ಲಿರುವವರ ಗುಣಲಕ್ಷಣವಾಗಿರುವ ದೀನತೆಯು ಮನೋಭಾವನೆಯಿಂದ ದೂರವಾಗಿರುತ್ತದೆ. ನೀನು ಹುಟ್ಟಿರುವದಕ್ಕಿಂತ ಮೊದಲು ಎರಡು ಸಾವಿರ ವರ್ಷಗಳಿಂದ ಕ್ರಿಸ್ತನ ಸಭೆಯು ಜೀವಿಸಿದೆ ಹೇಗೂ ನೀನು ಎಂದೂ ಅದರ ಸದಸ್ಯನಾಗದಿದ್ದರೂ ಜೀವಿಸುವದನ್ನು ಅದು ಮುಂದುವರಿಸುತ್ತದೆ.

## ಸಾಕಷ್ಟು ಕಾರಣಗಳು

ಪೂರ್ವದಿಂದ ಪಶ್ಚಿಮವು ಎಷ್ಟು ದೂರವೋ, ಕ್ರೈಸ್ತನಿಗೂ ಕ್ರೈಸ್ತನಲ್ಲದವನಿಗೂ ಮಧ್ಯದಲ್ಲಿ ಭಿನ್ನತೆಯು ಅಷ್ಟು ವಿಶಾಲವಾಗಿದೆ. ಒಂದು ಸಲ ಭಿನ್ನತೆಯನ್ನು ನೀನು ಅರ್ಥಮಾಡಿಕೊಂಡರೆ, ಅಲ್ಪ ಮಟ್ಟದಲ್ಲಿ ಅರ್ಥಮಾಡಿಕೊಂಡರೂ, ನಿನ್ನ ಕರ್ತನಿಗೆ ವಿಧೇಯನಾಗಲು ಮತ್ತು ಆತನ ಸಭೆಯ ಸದಸ್ಯನಾಗಲು ಒಂದು ತಾಸೂ ನೀನು ತಡ ಮಾಡುವದಿಲ್ಲ.

ಕೆಳಗಿನ ವ್ಯತ್ಯಾಸಗಳನ್ನು ಯೋಚಿಸಿರಿ:

| ಕ್ರೈಸ್ತರು | ಕ್ರೈಸ್ತೇತರರು |
|---|---|
| ಜೊತೆ ನಾಗರಿಕರು | ಪರಕೀಯರು |
| ದೇವರ ಸ್ನೇಹಿತರು | ದೇವರ ವೈರಿಗಳು |
| ಪರಿಶುದ್ಧರು | ಪಾಪಿಗಳು |
| ಕ್ರಿಸ್ತನಲ್ಲಿ ಸಜೀವರು | ಪಾಪದಲ್ಲಿ ಸತ್ತು ಹೋದವರು |
| ಆತನ ಆಶ್ಚರ್ಯಕರವಾದ ಬೆಳಕಿನಲ್ಲಿ | ಅಂಧಕಾರದ ಬಲದಲ್ಲಿ |
| ದೇವರ ಆಶ್ರಯದಲ್ಲಿ | ಸೈತಾನನ ಬಲದಲ್ಲಿ |

ಪಾಪದಲ್ಲಿ ಸತ್ತು ಹೋಗಿರುವುದು ಎಷ್ಟು ಭಯಂಕರವಾದದ್ದಲ್ಲವೋ! ಕ್ರಿಸ್ತನಿಲ್ಲದೆ, ದೇವರಿಲ್ಲದೆ, ನಿರೀಕ್ಷೆಯಿಲ್ಲದೆ ಇರುವಂಥದ್ದು ಎಷ್ಟು ದುಃಖಕರವಾದದ್ದಾಗಿದೆ. "ಯೆಹೋವನೇ, ನನಗೆ ಅವಸಾನವುಂಟೆಂದೂ ನನ್ನ ಜೀವಮಾನವು ಅತ್ಯಲ್ಪ ವೆಂದೂ ನಾನು ಎಷ್ಟೋ ಅಸ್ಥಿರನೆಂದೂ ನನಗೆ ತಿಳಿಯಪಡಿಸು" (ಕೀರ್ತನೆ 39:4). ನೀವು ಕತ್ತಲೆಯ ಅಧಿಕಾರದಲ್ಲಿದ್ದೀರಿ, ಸೈತಾನನ ಬಲದೊಳಗೆ ಇದ್ದೀರಿ ಎಂಬ ವಿಚಾರವು ಎಷ್ಟು ನಾಶನಕರವಾದದ್ದಾಗಿರುವದಲ್ಲವೇ! ನೀನು ಸರ್ವಶಕ್ತನಾದ ತಂದೆಯ ಕಾಪಾಡುವಿಕೆಯಲ್ಲಿ ಇರುವಿ ಎಂಬುದನ್ನು ತಿಳಿಯುವದರ ಬಲವನ್ನು ಕಲ್ಪಿಸಿಕೋ. ನೀನು ಕ್ರೈಸ್ತನಾದರೆ, ದೇವರಲ್ಲಿ ಕ್ರಿಸ್ತನೊಂದಿಗೆ ನೀವು ಮರೆಯಾಗಿ ಇಡಲ್ಪಡುವಿ. ನೀನು ಅಲ್ಲಿರಲು ಬಯಸಿದರೆ, ಯಾರೂ ನಿನ್ನನ್ನು ಅಲ್ಲಿಂದ ತಗೆದು ಹಾಕಲು ಶಕ್ತರಾಗುವದಿಲ್ಲ.

ಈ ವ್ಯತ್ಯಾಸಗಳು ನೀನು ದೇವರಿಗೆ ವಿಧೇಯನಾಗಲು ಬಯಸುವಂತೆ ಮಾಡದಿದ್ದರೆ, ಪಕ್ಕಕ್ಕೆ ತಳ್ಳಲು ಕಠಿಣವಾದ ಇತರ ಕಾರಣಗಳು ಇನ್ನೂ ಇವೆ.

**ಕೃತಜ್ಞತೆಯ ಕಾರಣದಿಂದ**

ಬೇರೆ ಇತರ ಕಾರಣದಿಂದಲ್ಲದಿದ್ದರೂ, ಕೃತಜ್ಞತೆಯ ನಿಮಿತ್ತವಾಗಿ ನೀನು ಸೃಷ್ಟಿಕರ್ತನ ಸೇವೆ ಮಾಡಬೇಕು. ದಯೆಯುಳ್ಳಾತನು ನಿನಗೆ ಜನ್ಮ ಕೊಟ್ಟನು - ಅದರಿಂದ ನೀನು ಏನು ಮಾಡಬೇಕಾಗಿತ್ತು? ವಿವೇಕವುಳ್ಳಾತನು ಕುರುಣೆಯಿಂದ ನಿನ್ನನ್ನು ಸುಂದರವಾದ ಮತ್ತು ಶ್ರೇಷ್ಠವಾದ ಜಗತ್ತಿನಲ್ಲಿ ಇಟ್ಟಿರುವನು - ಅದರಿಂದ ನೀನು ಏನು ಮಾಡಬೇಕು? ನಿನ್ನ ಎಲ್ಲಾ ಸಂತೋಷವು ಬೆಳಕುಗಳ ತಂದೆಯಿಂದ ಬಂದದ್ದಾಗಿದೆ, ಆತನಿಂದ ಭಿನ್ನತೆಗಳೂ ಬದಲಾಗುತ್ತಿರುವ ನೆರಳುಗಳೂ ಇರುವದಿಲ್ಲ (ಯಾಕೋಬ 1:17). ನೀನು ದೇವರ ರೊಟ್ಟಿಯನ್ನು ತಿಂದು ಮತ್ತು ಆತನ ಗಾಳಿಯನ್ನು ಉಸುರಾಡಿಸಿ, ಆತನಿಗೆ ದಂಗೆಯಲ್ಲಿ ನೀನು ಉಳಿದುಕೊಳ್ಳಬಹುದೋ? ಸೂರ್ಯೋದ ಯದಲ್ಲಿ ಆತನ ಚಿತ್ರವನ್ನು ನೋಡಿ ಇಲ್ಲವೇ ಅಡವಿಯಲ್ಲಿ ದೇವರು ನಿರ್ದೇಶಿಸುವ ಸಂಗೀತವನ್ನು ಕೇಳಿ, ದೇವರು ನಿನಗೆ ಮಾಡಬೇಕೆಂದು ಕೇಳುವದನ್ನು ನೀನು ಮಾಡದಿರಬಹುದೋ? ಒಬ್ಬನು ದೇವರ ಆಶೀರ್ವಾದಗಳನ್ನು ಸ್ವೀಕರಿಸುವಾಗ ಕೃತಜ್ಞತೆಯುಳ್ಳವನಾಗಿ, ಅನಂತರ ಕ್ರೈಸ್ತನಾಗುವದಕ್ಕೆ ಆತನಿಗೆ ವಿಧೇಯನಾಗುವದನ್ನು ತಿರಸ್ಕರಿಸಬಹುದೋ? ಆತನಿಗೆ ವಿಧೇಯನಾಗುವುದು "ನಿನಗೆ ಉಪಕಾರ" ಎಂದು ಹೇಳುವ ಒಂದು ಸಣ್ಣ ಮಾರ್ಗವಾಗಿದೆ. ಆಗಲೂ ಸಹ, ನಾವು ಪ್ರಯೋಜನವಿಲ್ಲದ ಸೇವಕರಾಗುತ್ತೇವೆ.

ಆತನ ಲೌಕಿಕ ಆಶೀರ್ವಾದಗಳಿಗಾಗಿ ಆತನನ್ನು ತಳ್ಳಿ ಬಿಡುವಷ್ಟು ನೀವು ಅಷ್ಟು ಕೃತಜ್ಞತೆಯಿಲ್ಲದವರಾಗಿದ್ದರೆ, ನಿಶ್ಚಯವಾಗಿಯೂ ಮೆಸ್ಸೀಯನ ಜಜ್ಜಲ್ಪಟ್ಟ, ಕೆಂಪು ರಕ್ತದಿಂದ ಸುರಿಯುತ್ತಿರುವ ದೇಹವನ್ನು ನೀವು ನೋಡುವಾಗ ನೀವು ಇನ್ನು ಮುಂದೆ ಆತನನ್ನು ತಿರಸ್ಕರಿಸಲಾರಿರಿ. ಆತನ ಮುಖ ಯಾಕೆ ಕುರೂಪವಾಯಿತು; ಆತನ ದೇಹ ಜಜ್ಜಲ್ಪಟ್ಟಿತು? ಆತನು ಯಾವ ತಪ್ಪನ್ನು ಮಾಡಿದ್ದನು? "ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು" (ಯೆಶಾಯ 53:4ಎ). ನಿಜವಾಗಿಯೂ ಕ್ರಿಸ್ತನ ಪ್ರೀತಿಯು ನಿಮ್ಮನ್ನು ಒತ್ತಾಯಿಸಬೇಕು: "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ; ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತು ಎಂದು ನಿಶ್ಚಯಿಸಿಕೊಂಡೆವು" (2 ಕೊರಿಂಥ 5:14). ಹೀಗಿ ರುವದರಿಂದ ಇನ್ನು ಮುಂದೆ, ನೀವು ನಿಮಗಾಗಿ ಜೀವಿಸಬಾರದು, ಆದರೆ ನಿಮಗಾಗಿ

ಸತ್ತು, ಎದ್ದು ಬಂದಾತನಿಗಾಗಿ ಜೀವಿಸಬೇಕು.

ಕೃತಜ್ಞತೆಯುಳ್ಳ ಹೃದಯವು ಕ್ರಿಸ್ತನಿಗೆ ವಿಧೇಯರಾಗಲು ನಿಮ್ಮನ್ನು ಚಲಿಸದಿದ್ದರೆ, ಕ್ರೈಸ್ತರಿಗಾಗಿ ಇಡಲ್ಪಟ್ಟಿರುವ ಉತ್ತಮವಾದ ಆಶೀರ್ವಾದಗಳ ಕಡೆಗೆ, ಬೇರಾರಿಗೂ ಅಲ್ಲದೇ ಕ್ರೈಸ್ತರಿಗಾಗಿ ಮಾತ್ರ ಇಡಲ್ಪಟ್ಟ ಆಶೀರ್ವಾದಗಳ ಕಡೆಗೆ ನೋಡಿರಿ. ದೇವರ ಜನರಂತೆ ಪಾಪಿಗಳೂ ಸಹ ದೈಹಿಕ ಆಶೀರ್ವಾದಗಳನ್ನು ಹೊಂದಿಕೊಳ್ಳುವರು, ಆದರೆ ಆತ್ಮಿಕ ಆಶೀರ್ವಾದಗಳು "ಪರಿಶುದ್ಧರಾಗಿ ಕರೆಯಲ್ಪಟ್ಟವರಿಗೆ" ಮಾತ್ರ ಒಳಪಟ್ಟಿರುವವು (1 ಕೊರಿಂಥ 1:2; KJV), ಅವರು ಆತನ ಸಭೆಯ ಸದಸ್ಯರಾಗಿರುವರು. ನೀವು ಮನುಷ್ಯಕುಮಾರನಿಗೆ ಬಹಿರಂಗವಾಗಿ ದಂಗೆಯಲ್ಲಿರುವಾಗಲೂ ನಿಮ್ಮ ತೋಟದ ಮೇಲೆ ಮಳೆ ಬೀಳುವುದು, ಆದರೆ ಕ್ರೈಸ್ತನಾಗುವವರೆಗೆ ಶುದ್ಧೀಕರಿಸಲ್ಪಟ್ಟ, ಶುಭ್ರವಾದ ಆತ್ಮವನ್ನು ಎಂದೂ ಅನುಭವಿಸಲಾರಿ: "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38ಎ). ನಿಮ್ಮ ಎಲ್ಲಾ ದಿನಗಳಲ್ಲಿ ನೀವು ದೇವರ ವೈರಿಗಳಾಗಿದ್ದರೂ ಸೂರ್ಯನ ಬೆಳಕು ನಿಮ್ಮನ್ನು ಸಂತೋಷಗೊಳಿಸಿ ನಿಮ್ಮ ಜೀವಿತಗಳನ್ನು ಬಲಗೊಳಿಸುವುದು, ಆದರೆ ನೀವು ಕ್ರಿಸ್ತನ ಸುವಾರ್ತೆಗೆ ವಿಧೇಯರಾಗದವರೆಗೆ ಪರಿಶುದ್ಧಾತ್ಮನ ವರವು ಎಂದೆಂದಿಗೂ ನಿಮ್ಮದಾಗುವದಿಲ್ಲ. ನೀನು ಒಂದು ಉತ್ತಮವಾದ ಮನೆಯನ್ನು ಕಟ್ಟಬಹುದು ಮತ್ತು ಎಲ್ಲಾ ಸಮಯದಲ್ಲಿ ದುಷ್ಟನಾಗಿರಬಹುದು, ಆದರೆ ಪರಲೋಕದಲ್ಲಿರುವ ಆ ಮನೆಯು ದೇವರ ಜನರಿಗಾಗಿ ಮಾತ್ರ ಗೌರವಿಸಲ್ಪಟ್ಟಿದೆ. ತೀರದ ಸಂಗತಿಗಳು ಕ್ರೈಸ್ತರಿಗೆ ಮಾತ್ರ ಇರುತ್ತವೆ. ತೋಟಗಳು ತಿನ್ನಲ್ಪಡುವವು. ಸೂರ್ಯಪ್ರಕಾಶ ಕಳೆಗುಂದುವುದು ಮತ್ತು ಮನೆಗಳು ಹಳೆಯವಾಗುವವು; ಆದರೆ ಪಾಪಗಳ ಪರಿಹಾರವು, ದೇವರ ಆತ್ಮನ ವರವು, ಅಮರ ಮಹಿಮೆಯ ನಿರೀಕ್ಷೆಯು - ಈ ಸಂಗತಿಗಳು ಎದೆಂದಿಗೂ ಹೊಸದಾಗಿ ಉಳಿಯುವವು ಮತ್ತು ಮುಂದುವರಿಯುವವು. ಲೋಕದಲ್ಲೆಲ್ಲಾ ಅವು ಮಾತ್ರವೇ ಬೇಕಾದ ಸಂಗತಿಗಳಾಗಿವೆ, ಮತ್ತು ಕ್ರೈಸ್ತನನ್ನು ಬಿಟ್ಟು ಬೇರಾರಿಗೂ ಅವು ಇರುವದಿಲ್ಲ. ನೆರಳುಗಳ ಕಣಿವೆಯು ದೇವರ ಮಗುವಿಗೆ ಭಯಾನಕವಾಗಿರುವದಿಲ್ಲ. ಕ್ರೈಸ್ತನು ಸಮಾಧಿಯೊಳಗೆ ನಡೆದಾಡಿ, ಮರಣದ ಕಡೆಗೆ ನಗಬಹುದು ಅದಕ್ಕೆ ಅಪಹಾಸ್ಯಮಾಡಲೂ ಬಹುದು: "ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದಕೊಂಡಿ ಎಲ್ಲಿ?" (1 ಕೊರಿಂಥ 15:55). ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ನಮಗೆ - ಕ್ರೈಸ್ತರಿಗೆ - ಜಯಕೊಡುವ ದೇವರಿಗೆ ಸ್ತೋತ್ರ (1 ಕೊರಿಂಥ 15:57).

**ಯಾಕಂದರೆ ಅದು ಪರಿಶುದ್ಧ ಬರಹಕ್ಕೆ ಅನುಗುಣವಾದದ್ದು**

ನಮ್ಮ ಕರ್ತನಾದ ಯೇಸುಕ್ರಿಸ್ತನ ಸಭೆಯ ಒಬ್ಬ ಸದಸ್ಯನಾಗಿರಲಿಕ್ಕೆ ನಾನು ತಿಳಿದಿರುವ ಅತ್ಯುತ್ತಮ ಕಾರಣಗಳಲ್ಲಿ ಒಂದು, ಅದರ ಬಗ್ಗೆ ನಾವು ಬೈಬಲಿನಲ್ಲಿ ಓದಬಹುದು. ಅದು ನನಗೆ ಮಹತ್ವದ್ದೆಂದು ತೋರುತ್ತದೆ. ದೇವರು ಒಂದು ಸಲವಾದರೂ ತನ್ನ ಪರಿಶುದ್ಧ ಪುಸ್ತಕದಲ್ಲಿ ಎಂದೂ ಉಲ್ಲೇಖಿಸದೇ ಇದ್ದ ಒಂದು ಸಭೆಯ ಸದಸ್ಯನು ನಾನಾಗಿದ್ದರೆ, ನಾನು ಚಿಂತಿಸಬಹುದಿತ್ತು. ನೀನು ಸದಸ್ಯನಾಗಿರುವ ಸಭೆಯ ಬಗ್ಗೆ ಯಾರಾದರೂ ನಿನ್ನನ್ನು ಕೇಳಿದರೆ, ಪರಿಶುದ್ಧ ಬರಹಗಳ ಕಡೆಗೆ ತಿರುಗಿ, "ನಾನು ಸದಸ್ಯನಾಗಿರುವ ಸಭೆಯ ಬಗ್ಗೆ ಇಲ್ಲಿ ಕರ್ತನು ಹೇಳಿದ್ದಾನೆ" ಎಂದು ಹೇಳಬಹುದೋ? ಯೇಸುವಿಗೆ ಒಳಪಟ್ಟ ಸಭೆಯ ಸದಸ್ಯನು ನೀನಾಗಿದ್ದರೆ ಇದನ್ನು ಮಾಡಬಹುದು. ಮತ್ತಾಯ 16:18 ರಲ್ಲಿ ಯೇಸುವು "ನನ್ನ ಸಭೆ," ಎಂದು ಹೇಳಿದನು. "ನನ್ನ ಸಭೆಗಳು," ಎಂದು ಆತನು

ಹೇಳಲಿಲ್ಲ, ಆದರೆ "ನನ್ನ ಸಭೆ" ಎಂದಷ್ಟೆ ಹೇಳಿದನು. ಪರಿಶುದ್ಧ ಬರಹಗಳಲ್ಲಿ ಅಂಥ ಒಂದೇ ಸಂಸ್ಥೆಯೂ ಪ್ರಕಟಿಸಲ್ಪಟ್ಟಿದೆ. ಬೈಬಲನಲ್ಲಿಯ ಸಂಸ್ಥೆಯಲ್ಲಿ ನಾನು ಇರಲು ಬಯಸುತ್ತೇನೆ. ಅದು "ದೇವರ ಸಭೆ" ಎಂದು ಕರೆಯಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 20:28; 1 ಕೊರಿಂಥ 1:2). ಕ್ರೈಸ್ತರ ಸ್ಥಳಿಕ ಗುಂಪುಗಳು "ಕ್ರಿಸ್ತನ ಸಭೆಗಳು" ಎಂದು ಕರೆಯಲ್ಪಟ್ಟವು (ರೋಮಾಪುರ 16:16). ಬೈಬಲಿನಲ್ಲಿ ನಿರ್ದಿಷ್ಟವಾಗಿ ನಮೂದಿಸಲ್ಪಟ್ಟ ಸಭೆಯ ಸದಸ್ಯನಾಗಿರಲು ನೀನು ಬಯಸುವದಿಲ್ಲವೋ?[1] "ಕರ್ತನೇ, ಬೈಬಲಿನಲ್ಲಿ ನಮೂದಿಸದೇ ಇರುವ ಸಭೆಯಲ್ಲಿ ಭೂಲೋಕದಲ್ಲಿ ನನ್ನ ಎಲ್ಲಾ ಸಮಯವನ್ನು ಕಳೆದೆನು" ಎಂದು ನ್ಯಾಯತೀರ್ವಿಕೆಯಲ್ಲಿ ಹೇಳಲು ದೇವರ ಮುಂದೆ ಕಾಣಿಸಿಕೊಳ್ಳವದಕ್ಕೆ ನನಗೆ ಭಯವಾಗುತ್ತದೆ.

ಯೇಸುವು ಕಟ್ಟಿದ ಸಭೆಯು ವಿಶ್ವವ್ಯಾಪ್ತಿ ಸಭೆಯಾಗಿರುತ್ತದೆ ಅಂದರೆ ತನ್ನ ಸೇವೆಯಲ್ಲಿ ಜಾಗತಿಕವಾದದ್ದಾಗಿದೆ ಎಂದರ್ಥ. ನಮ್ಮ ಕರ್ತನ ಸಭೆಯು "baptist" ಸಭೆಯಾಗಿದೆ. ಯಾಕಂದರೆ ಅದು ಪಾಪಿಗಳಿಗೆ ಬಾಪ್ತಿಸ್ಮ ಕೊಡುವದನ್ನು ಆಚರಿಸುತ್ತದೆ. ಬೈಬಲಿನಲ್ಲಿ ನೀವು ಓದುವಂಥ ಸಭೆಯು ಸಂಗತಿಗಳನ್ನು ("methodically"), ಒಂದು ಕ್ರಮಬದ್ಧವಾದ ರೀತಿಯಲ್ಲಿ ಮಾಡುತ್ತದೆ. ಕ್ರಿಸ್ತನ ಸಭೆಗೆ "presbyters" (ಹಿರಿಯರ) ಆಡಳಿತೆಯಿರುತ್ತದೆ. ದೇವರ ಸಭೆಯು "congregational" ಆಗಿದೆ, ಯಾಕಂದರೆ ಪ್ರತಿಯೊಂದು ಸಭೆಯು ಸ್ವತಂತ್ರವಾಗಿದ್ದು, ತನ್ನ ವ್ಯವಹಾರಗಳನ್ನು ತಾನೇ ನೋಡಿಕೊಳ್ಳುತ್ತದೆ. ರಕ್ತ ಕ್ರಯದಿಂದ ಕೊಳ್ಳಲ್ಪಟ್ಟ ಹೊಸ ಒಡಂಬಡಿಕೆಯ ಸಭೆಯು "episcopalian" ಸಭೆಯಾಗಿರುತ್ತದೆ, ಯಾಕಂದರೆ ಸಭೆಯ ಮೇಲೆ ಅದಕ್ಕೆ ಬಿಷಪರುಗಳು ಇರುತ್ತಾರೆ (ಗ್ರೀಕ: *episcopoi*) ಕರ್ತನ ಸಂಸ್ಥೆಯು ಒಂದು "adventist" ಸಭೆಯಾಗಿರುತ್ತದೆ, ಯಾಕಂದರೆ ಅದು ಯಾವಾಗಲೂ ಆತನ ಬರೋಣವನ್ನು ನೋಡುತ್ತಿರುತ್ತದೆ. ಯೇಸುವಿನ ಸಭೆಯು ಸಹೋದರರ ಸಭೆಯಾಗಿರುತ್ತದೆ. ಅದು ಐಕ್ಯತೆಯುಳ್ಳ ಸಹೋದರರನ್ನು ಒಳಗೊಂಡಿರುತ್ತದೆ. ಅದು "evangelical" ಆಗಿರುತ್ತದೆ, ಯಾಕಂದರೆ ಅದು ಮಿಶನರಿ ಕೆಲಸದಲ್ಲಿ ನಂಬಿಕೆಯಿಡುತ್ತದೆ. ಅದು "holy" ಚರ್ಚ್ ಆಗಿರುತ್ತದೆ. ಅದು ಕ್ರೈಸ್ತರನ್ನು ಒಳಗೊಂಡಿರುತ್ತದೆ. ಹಾಗಿದ್ದರೂ, ಹೊಸ ಒಡಂಬಡಕೆಯ ಸಭೆಯು ಎಂದೂ ಈ ಅಂಕಿತಗಳಿಂದ ಹೊಸ ಒಡಂಬಡಿಕೆಯ ಸಭೆಯು ಕರೆಯಲ್ಪಡಲಿಲ್ಲ. ಹೀಗೆ 1600ರವರೆಗೆ ಇಲ್ಲವೇ ಅನಂತರದ ವರೆಗೆ ಅಸ್ತಿತ್ವದಲ್ಲಿ ಬಾರದೇ ಇದ್ದ ಸಭಾಪಂಗಡಗಳಿಂದ ಇದು ಗುರುತಿಸಲ್ಪಡಬಾರದು.

ಪುರುಷರಿಂದ ಮತ್ತು ಮಹಿಳೆಯರಿಂದ ಮಾಡಲ್ಪಟ್ಟ ಸಭೆಗಳು ಯೇಸುವಿಗೆ ಒಳಪಟ್ಟಿವೆ ಎಂದು ಹೇಳಿಕೊಳ್ಳುವಂಥವುಗಳು ಇರುತ್ತವೆ. ನಾವು ಇವುಗಳಲ್ಲಿ ಯಾವುದರ ಸದಸ್ಯನೂ ಆಗಿರುವದಿಲ್ಲ. ಮತ್ತು ಆಗಿರಲೂ ಬಯಸುವದಿಲ್ಲ. ಅವುಗಳ ಮೂಲವು ಭೂಲೋಕದ್ದಾಗಿದೆ, ಅವುಗಳ ವಿವರಣೆಯು ಬೈಬಲಿನಲ್ಲಿ ಇರುವದಿಲ್ಲ ಮತ್ತು ನಮ್ಮ ಕರ್ತನ ರಕ್ತವು ಅವುಗಳನ್ನು ಕೊಂಡುಕೊಳ್ಳಲಿಲ್ಲ. ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ಶುದ್ಧವಾದ, ಸಭಾಪಂಗಡವಲ್ಲದ ಸಭೆಗಾಗಿ (ಅಪೊಸ್ತಲರ ಕೃತ್ಯಗಳು 20:28). ಮತ್ತು ನನ್ನ ಕರ್ತನು ಹಿಂದಿರಿಗಿ ಬರಲಿಕ್ಕಿದ್ದ ಆ ಒಂದು ಸಂಸ್ಥೆಯನ್ನು ಉಲ್ಲೇಖಿಸುವಲ್ಲಿ ಶುದ್ಧ ಬೈಬಲ್ ಭಾಷೆಗಾಗಿ (ಎಫೆಸ 5:23) ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಯಾಕಂದರೆ ಅದು ಪರಲೋಕದಿಂದ ನಡಿಸಲ್ಪಟ್ಟಿದೆ**

ನಾನು ಯೇಸುವಿನ ಸಭೆಯ ಸದಸ್ಯನಾಗಿರಲು ಇನ್ನೊಂದು ಒಳ್ಳೆಯ ಕಾರಣವು

ಅದಕ್ಕೆ ಭೂಲೋಕದ ಕೇಂದ್ರಸ್ಥಳವು ಇಲ್ಲದಿರುವುದು. "ನಮ್ಮ ನಾಗರಿಕತ್ವವು ಪರಲೋಕದಲ್ಲಿರುವುದು" ಎಂದು ಪೌಲನು ಹೇಳಿದನು (ಫಿಲಿಪ್ಪಿ 3:20). ಆದುದರಿಂದ, ನಾನು ಕ್ರಿಸ್ತನ ಸಭೆಯ ಒಬ್ಬ ಸದಸ್ಯನಾಗಿದ್ದರೆ, ನಾನು ಸಾಲ್ಟ್ ಲೇಕ್ ಸಿಟಿಗೆ, ಊತಾಕ್ಕೆ, ಬೋಸ್ಟನ್ನಿಗೆ, ಮಸ್ಸಾಚುಸೆಟ್ಸಗೆ ಇಲ್ಲವೇ ರೋಮ್, ಇಟ್ಯಾಲಿಗಳ ಕಡೆಗೆ ನಿರ್ದೇಶನಗಳಿಗಾಗಿ ನೋಡಬೇಕಾಗಿರುವದಿಲ್ಲ. ಕ್ರಿಸ್ತನು ತನ್ನ ಸಭೆಯ ಕೇವಲ ಶಿರಸ್ಸಾಗಿದ್ದಾನೆ, ಅವರಲ್ಲಿ ಪ್ರತಿಯೊಬ್ಬ ಸದಸ್ಯನು "ಹೊಂದಿಕೆಯಾಗಿ ಕಟ್ಟಡವೂ ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ದಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:21, 22).

ಆತನು ಸಭೆಯ ವಿಶ್ವಾಸ ಸೂತ್ರದ ಪುಸ್ತಕದ ಕಾರಣದಿಂದ ಯೇಸುವಿಗೆ ಒಳಪಟ್ಟ ಸಭೆಯ, ಕ್ರಿಸ್ತನ ಸಭೆಯ ಒಬ್ಬ ಸದಸ್ಯನು ನಾನಾಗಿದ್ದೇನೆ. ಅದು ಆತನ ಸಭೆ. ಆತನು ಅದರ ಶಿರಸ್ಸು (ಕೊಲೊಸ್ಸೆ 1:18), ಮತ್ತು ಆತನ ನಿಯಮವು ಅದನ್ನು ಆಳುತ್ತದೆ. ಹೊಸ ಒಡಂಬಡಿಕೆಯನ್ನು ಬರೆಯಲು ಆತನ ಆತ್ಮವು ಪರಿಶುದ್ಧ ಜನರನ್ನು ಪ್ರೇರೇಪಿಸಿತು. ಹೊಸ ಒಡಂಬಡಿಕೆಯು, ತನ್ನ ಸಭೆಗೆ ಯೇಸುವು ಕೊಟ್ಟ ಕೇವಲ ವಿಶ್ವಾಸ ಸೂತ್ರವಾಗಿದೆ. ಮಾನವ ಶಿಸ್ತು ಇಲ್ಲವೇ ವಿಶ್ವಾಸದ ಅರಿಕೆಯ ಒಂದು ಸಭೆಯ ಸದಸ್ಯನು ನೀನಾಗಿದ್ದರೆ, ನಿನ್ನ ಸಭೆಯು ಯೇಸುವಿನ ಸಭೆಯಾಗಿರುವದಿಲ್ಲ ಎಂಬುದು ಸ್ಪಷ್ಟವಾಗಿದೆ.

**ಯಾಕಂದರೆ ಅದು ಅಂತ್ಯದಲ್ಲಿ ನಿತ್ಯವಾದದ್ದಾಗಿದೆ**

ಯೇಸುವಿನ ಸಭೆಯ ಸದಸ್ಯನಾಗಿರುವದಕ್ಕೆ ನನಗೆ ಇನ್ನೊಂದು ಕಾರಣವು ಅದರ ನಾಶವಾಗಿಹೋಗುವಿಕೆಯು ಇಲ್ಲದಿರುವುದು. ಎಲ್ಲಾ ಮಾನವ ಸಂಸ್ಥೆಗಳು "ಕಿತ್ತು ಹೋಗುವವು" (ಮತ್ತಾಯ 15:13), ಆದರೆ ಪಾತಾಳಲೋಕದ ಬಲವು ಸಭೆಯನ್ನು ಸೋಲಿಸಲಾರದು (ಮತ್ತಾಯ 16:18). ಎಲ್ಲಾ ಯುಗಗಳಲ್ಲಿ, ತಲತಲಾಂತರಕ್ಕೂ ಯೇಸುವಿನ ಸಭೆಯಲ್ಲಿ ದೇವರು ಮಹಿಮೆಪಡಿಸಲ್ಪಡುವನು (ಎಫೆಸ 3:21).

**ಯಾಕಂದರೆ ಅದಕ್ಕೆ ಕ್ರಿಸ್ತನು ರಕ್ಷಕನಂತೆ – ಇರುವನು**

ಯೇಸು ಕ್ರಿಸ್ತನ ಸಭೆಯು ಸದಸ್ಯನಾಗಿರುವದಕ್ಕೆ ಇದಕ್ಕಿಂತ ಹೆಚ್ಚು ದೊಡ್ಡ ಇನ್ನೊಂದು ಕಾರಣವು ಇರುವದಿಲ್ಲ: ಅದರ ಹೊರಗೆ ಯಾವುದೇ ರಕ್ಷಣೆಯಿರುವದಿಲ್ಲ. ಸಭಾ ಪಂಗಡಗಳ ಹೋರಗೆ ನೀನು ರಕ್ಷಿಸಲ್ಪಡಬಹುದು, ಆದರೆ ನೀನು ಬೈಬಲಿನಲ್ಲಿ ಓದುವ ಸಭೆಯ ಹೊರಗೆ ನೀನು ರಕ್ಷಿಸಲ್ಪಡಲಾರಿ, ಕ್ರಿಸ್ತನ ರಕ್ತವಿಲ್ಲದೆ ನೀನು ರಕ್ಷಿಸಲ್ಪಡಲಾರಿ (ಮತ್ತಾಯ 26:28). ಯೇಸುವಿನ ರಕ್ತದ ಪ್ರತಿಯೊಂದು ಹನಿಯು ಆತನ ಸಭೆಯೊಳಗೆ ಹೋಗಿದೆ (ಅಪೊಸ್ತಲರ ಕೃತ್ಯಗಳು 20:28). ಯೇಸುವು ಒಂದು ದಿನ ಹಿಂದುರಿಗಿ ಬರಲಿಕ್ಕಿದ್ದಾನೆ, ಆದರೆ ತನ್ನ ಸಭೆಯ ಹೊರಗಿರುವವರ ಮೇಲೆ ರೋಷಕ್ಕಾಗಿ ಹಾಗೂ ಪ್ರತೀಕಾರಕ್ಕಾಗಿ ಬರುವನು. ನಿಜ, ತನ್ನ ಸಭೆಯಲ್ಲಿರುವ ಅಪನಂಬಿಗಸ್ತ ಜನರನ್ನು ಮುಳ್ಳು ಗಿಡಗಳಂತೆ ಅವರನ್ನು ಹೊಡೆದೊಡಿಸಿ ಹೊರಗೆ ಹಾಕುವನು (ಇಬ್ರಿಯ 6:8), ಅವರ ಅಂತ್ಯವು ಸುಡಲ್ಪಡುವುದಾಗಿದೆ; ಆದರೆ ಆತನ ಸಭೆಯ ಹೊರಗೆ ಇರುವ ಯಾರೊಬ್ಬನಿಗೂ ರಕ್ಷಣೆ ಇರುವದಿಲ್ಲ. ತನ್ನ ಸ್ವಕೀಯರನ್ನು ಕೂಡಿಸಲು ಆತನು ಬರುವ ದಿನದಲ್ಲಿ (ಮಲಾಕಿ 3:17), ಅವರು ಆತನ ರಕ್ತದಿಂದ

ತುಂಬಿದ ಬುಗ್ಗೆಯಿಂದ ಶುದ್ಧೀಕರಿಸಲ್ಪಟ್ಟವರಾಗಿರುವರು. ಅವರಲ್ಲಿ ಪ್ರತಿಯೊಬ್ಬರನ್ನು ಸೇರಿಸಿಕೊಳ್ಳುವೆನೆಂದು ಆತನು ವಾಗ್ದಾನ ಮಾಡಿರುವನು. ಯೇಸುವು "ದೇಹದ ರಕ್ಷಕನಾಗಿದ್ದಾನೆ" (ಎಫೆಸ 5:23), "ಆತನ ದೇಹವಾಗಿರುವ, ಸಭೆಗೆ ಎಲ್ಲಾ ಸಂಗತಿಗಳ ಮೇಲೆ ಶಿರಸ್ಸಾಗಿದ್ದಾನೆ" (ಎಫೆಸ 1:22, 23).

## ಮುಕ್ತಾಯ

ಹೊಸ ಒಡಂಬಡಿಕೆಯ ಸದಸ್ಯನಾಗಲು ಒಳ್ಳೇ ಕಾರಣಗಳು ಅಗಣಿತವಾಗಿದೆ ಮತ್ತು ಕ್ರೈಸ್ತನ ಮೇಲೆ ಕೊಡಲ್ಪಟ್ಟ ಆಶೀರ್ವಾದಗಳು ಅಳತೆಯನ್ನು ದಾಟಿ ಇರುತ್ತವೆ. ಆತನು ಈಗಾಗಲೇ ನಿಮಗೆ ಕೊಟ್ಟ ಆಶೀರ್ವಾದಗಳಿಗಾಗಿ ನೀನು ಕೃತಜ್ಞನಾಗಿರುವಿಯೋ? ಆತನು ಸ್ಥಾಪಿಸಿದ ಸಭೆಯ ಬಗ್ಗೆ ಪರಿಶುದ್ಧ ಬರಹಗಳಲ್ಲಿ ನೀನು ಓದಿರುವಿಯೋ? ಆ ಸಭೆಯ ವಿಶ್ವಾಸಸೂತ್ರವನ್ನು, ರಕ್ಷಕನನ್ನು ಮತ್ತು ನಿತ್ಯವಾದ ಅಂತ್ಯಸ್ಥಿತಿಯನ್ನು ನಿನ್ನ ಸ್ವಂತದ್ದನ್ನಾಗಿ ತೆಗೆದುಕೊಳ್ಳಲು ಅಪೇಕ್ಷಿಸಿದರೆ, ನೀನು ಕ್ರಿಸ್ತನ ದೇಹದ ಸದಸ್ಯನಾಗಾಲು ಇದು ಸಮಯವಾಗಿದೆ.

ರಕ್ಷಕನಂತೆ, ದೇವರ ಕುಮಾರನಂತೆ ಯೇಸು ಕ್ರಿಸ್ತನಲ್ಲಿ ನೀನು ನಂಬಿದರೆ, ಪೇತ್ರನು ಮಾಡಿದಂತೆ, ಆ ಅರಿಕೆ ಮಾಡುವ ಸಮಯವಿದಾಗಿದೆ (ಮತ್ತಾಯ 16:16; ನೋಡಿರಿ ರೋಮಾಪುರ 10:10). ನೀನು ಕ್ರಿಸ್ತನಿಗಾಗಿ ಜೀವಿಸಲು ಬಯಸಿದರೆ, ಆಗ ಇದು ನಿನ್ನ ಪಾಪಗಳಿಗಾಗಿ ಮಾನಸಾಂತರ ಪಡುವ ಸಮಯವಿದಾಗಿದೆ (ಅಪೊಸ್ತಲರ ಕೃತ್ಯಗಳು 2:38) ಮತ್ತು ಬಾಪ್ತಿಸ್ಮದಲ್ಲಿ ಅವು ತೊಳೆಯಲ್ಪಡುವ ಸಮಯವಿದಾಗಿದೆ (ಅಪೊಸ್ತಲರ ಕೃತ್ಯಗಳು 22:16). ಹೊಸ ಒಡಂಬಡಿಕೆಯ ಸಭೆಯ ಸದಸ್ಯನಾಗುವದಕ್ಕೆ ನಿನಗೆ ಸಾಕಷ್ಟು ಕಾರಣಗಳಿರುವವೋ?

---

ಟಿಪ್ಪಣಿ

[1]ನಿಜವಾಗಿಯೂ, ಬೈಬಲಿನಲ್ಲಿ ನಮೂದಿಸಲ್ಪಟ್ಟ ಸಭೆಗೆ ಹೆಸರಿರುವದಿಲ್ಲ. "ಯೋಹಾನನ ನಾಯಿ," ಎಂದು ನೀನು ಹೇಳಿದರೆ ನೀನು ಯೋಹಾನನ ನಾಯಿಯ ಹೆಸರನ್ನು ಹೇಳಿರುವದಿಲ್ಲ. "ಸ್ಯಾಮನ ಹೆಂಡತಿ," ಎಂದು ನೀನು ಮಾತನಾಡಿದರೆ, ನೀನು ಆಕೆಯ ಹೆಸರನ್ನು ಹೇಳಿರುವದಿಲ್ಲ. ನೀನು ಆಕೆಯ ಗಂಡನ ಹೆಸರನ್ನು ಹೇಳಿರುವಿ. ಆದರೆ ಆಕೆಯ ಹೆಸರನ್ನು ಹೇಳಿರುವದಿಲ್ಲ. "ಕ್ರಿಸ್ತನ ಸಭೆ" ಎಂದು ಹೇಳಿದರೆ, ನೀನು ಸಭೆಗೆ ಹೆಸರು ಕೊಟ್ಟಿರುವದಿಲ್ಲ - ಸಭೆಯು ಯಾರಿಗೆ ಒಳಪಟ್ಟಿದೆ ಎಂದು ಮಾತ್ರ ನೀನು ಹೇಳಿರುವಿ. ಹೀಗೆ ಬೈಬಲಿನ ಸಭೆಯು ಹೆಸರು ಇಲ್ಲದ್ದಾಗಿದೆ.

© 2009 Truth for Today